# ವಿಶ್ವ ಸಂವಿಧಾನ ಮತ್ತು ಸಂಸದು ಸಂಘ (WCPA)

## ಜಾಗತಿಕ ನೈತಿಕತೆ ಮತ್ತು ವಿಶ್ವ ಪೌರತ್ವದ ಹತ್ತು ಮೂಲ ತತ್ವಗಳು

**೧.ಮಾತುಕತೆ** :ಪ್ರತಿ ವಿಶ್ವ ಪೌರನು ಪರಸ್ಪರ ತಿಳುವಳಿಕೆಯ ದಿಕ್ಕಿನಲ್ಲಿ ಮಾತುಕತೆಗಾಗಿ ಸಾಮರ್ಥ್ಯವನ್ನು ಬೆಳೆಸಿಕೊಳ್ಳುತ್ತಾನೆ. ಇತರರ ವಿಚಾರಗಳನ್ನು ಗಮನವಿಟ್ಟು ಕೇಳುವುದು, ಅವರ ವಿಚಾರಧಾರೆಯನ್ನು ವೈಚಾರಿಕವಾಗಿ ಗ್ರಹಿಸುವುದರ ಜೊತೆಗೆ ಗೌರವಯುತವಾದ ಸಂಭಾಷಣೆಯಲ್ಲಿ ತೊಡಗುವ ಸಾಮರ್ಥ್ಯವನ್ನು ಹೊಂದಿರುತ್ತಾನೆ.

**೨.ಅಹಿಂಸೆ:** ಪ್ರತಿ ವಿಶ್ವ ಪೌರನೂ ಅಹಿಂಸಾಮಾರ್ಗದ ಬಳಕೆಯಿಂದ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ವಿಶ್ವಾಸವನ್ನು ತೋರುತ್ತಾನೆ. ಮಹಾತ್ಮ ಗಾಂಧಿಯವರು ತಿಳಿಸಿರುವಂತೆ ಸಮಸ್ಯೆಗಳನ್ನು ಪರಿಹರಿಸಲು ವಿನೂತನವೂ, ಬುದ್ಧಿಮತ್ತೆಯಿಂದ ಕೂಡಿರುವ ಮತ್ತು ಸಂಬಂಧಿತ ಎಲ್ಲರನ್ನೂ ಗೌರವದಿಂದ ಕಾಣುವ ಹತ್ತು ಹಲವು ದಾರಿಗಳಿವೆ. ವಿಶ್ವ ಪೌರರೆಲ್ಲರೂ ಸೃಜನಾತ್ಮಕ, ಅಹಿಂಸಾತ್ಮಕ ಸಮಸ್ಯಾ ಪರಿಹಾರವನ್ನು ಬೆಂಬಲಿಸುತ್ತಾರೆ.

**೩.ಮಾನವ ಹಕ್ಕುಗಳು:** ವಿಶ್ವ ಪೌರರು, ಸಾರ್ವತ್ರಿಕ ಮಾನವ ಹಕ್ಕುಗಳು ಮತ್ತು ವ್ಯಕ್ತಿ ಘನತೆಯ ರಕ್ಷಣೆಯನ್ನು ಬೆಂಬಲಿಸುತ್ತಾರೆ. ಜಗತ್ತಿನ ಜೀವನಲೀಲೆಯಲ್ಲಿ ಎಲ್ಲರೂ ಸೇರಿರುವುದರಿಂದ ಪ್ರತಿಯೊಬ್ಬರಿಗೂ ಅವರದೇ ಆದ ಘನತೆ ಇದೆ. ನಾವೆಲ್ಲ ಮಾನವರೂ ಸ್ವಾತಂತ್ರ್ಯ , ಸೃಜನಶೀಲತೆ, ಅನುಕಂಪ ಮತ್ತು ನ್ಯಾಯ ತತ್ಪರತೆಗೆ ಶಕ್ತರೆಂಬ ಸ್ವಯಂ-ಅರಿವನ್ನು ಹೊಂದಿದ್ದೇವೆ.

**೪.ದಯೆ ಮತ್ತು ಅನುಕಂಪ:** ವಿಶ್ವ ಪೌರರು ವೈಚಾರಿಕತೆ ಮತ್ತು ಮಾತುಕತೆಯು 'ದಯೆ ಮತ್ತು ಅನುಕಂಪ'ದಿಂದ ಕೂಡಿರುವವೆಂದು ನಂಬಿದ್ದಾರೆ. ಇವರು ಇತರ ಮನುಜರು ಮತ್ತು ಪ್ರಾಣಿಗಳ ಬವಣೆಗಳ ಬಗೆಗೆ ಸಂವೇದನಾ ಶೀಲರಾಗಿದ್ದು ದಯೆ ಮತ್ತು ಅನುಕಂಪಗಳಿಂದ ವರ್ತಿಸುತ್ತಾರೆ. ಇದನ್ನೇ ಬೌದ್ಧ ಧರ್ಮದಲ್ಲಿ 'ಕರುಣೆ' ಎಂದೂ, ಕ್ರೈಸ್ತ ಮತದಲ್ಲಿ 'ಎಗ್ಯಾಪಿ' ಎಂದೂ ಕರೆಯುತ್ತಾರೆ.

೬.ವೈವಿಧ್ಯತೆಯಲ್ಲಿ ಏಕತೆ: ವಿಶ್ವವು ವಿವಿಧತೆಯಲ್ಲಿಯೂ ಏಕತೆಯನ್ನು ಬಿಂಬಿಸುವ ಉತ್ತಮ ನಿದರ್ಶನವಾಗಿದ್ದು, ಇದನ್ನು ಗೌರವಿಸುವುದರ ಜೊತೆಗೆ ಪ್ರೋತ್ಸಾಹಿಸುವುದರ ಅವಶ್ಯಕತೆಯನ್ನೂ ವಿಶ್ವ ಪೌರರು ಮನಗಂಡಿದ್ದಾರೆ. ಬೇರೆ ಬೇರೆ ಜಾತಿ,ಮತ,ಪಂಗಡ, ಸಂಸ್ಕೃತಿ, ದೇಶ ಮತ್ತು ಭಾಷೆಗಳಿಗೆ ಸೇರಿದ್ದರೂ, ಮಾನವ ಜನಾಂಗಕ್ಕೆ ಸೇರಿದ ನಾವೆಲ್ಲ ಒಂದೇ ಆಗಿದ್ದು, ಒಂದೇ ವಿಶ್ವ ಶಕ್ತಿಯ ಸಂತಾನವಾಗಿದ್ದೇವೆ. ವಿಶ್ವ ಪೌರರಾಗಿ ನಾವು, ಈ ವೈವಿಧ್ಯತೆಯಲ್ಲಿ ಏಕತೆ ತತ್ವವನ್ನು ಬಲವಾಗಿ ಪ್ರತಿಪಾದಿಸುತ್ತೇವೆ.

೭.ನ್ಯಾಯ ಪ್ರಕ್ರಿಯೆ: ವಿಶ್ವ ಪೌರರು ಕಾನೂನಿನಡಿಯಲ್ಲಿ ಎಲ್ಲರಿಗೂ ಸಮಾನತೆ ಮತ್ತು ನ್ಯಾಯಬದ್ಧ ವ್ಯವಸ್ಥೆಯನ್ನು ಪ್ರೋತ್ಸಾಹಿಸುತ್ತಾರೆ. ಕಾನೂನು ನ್ಯಾಯಪರವಲ್ಲದಿದ್ದಲ್ಲಿ, ಎಲ್ಲರಿಗೂ ಸಮಾನ ರಕ್ಷಣೆಯನ್ನು ಒದಗಿಸುವ ಸಲುವಾಗಿ ಅದನ್ನು ಬದಲಾಯಿಸಲು ಪರಿಶ್ರಮ ಪಡುತ್ತಾರೆ. ಎಲ್ಲಿಯಾದರೂ ಜನರನ್ನು ಬದಿಗೊತ್ತಲ್ಪಟ್ಟು, ಪೀಡಿತರಾಗಿ,ಶೋಷಣೆಗೆ ಒಳಪಟ್ಟಲ್ಲಿ ವಿಶ್ವ ಪೌರರು ಅಂತಹವರ ಆಸರೆಗೆ ನಿಲ್ಲುತ್ತಾರೆ.

೮.ಸಹಿಷ್ಣುತೆ: ವಿಶ್ವ ಪೌರರು ಈ ಪೃಥ್ವಿಯ ಮೇಲಿನ ಜೀವನ ಪ್ರಕಿಯೆಯನ್ನು ನಿರಂತರವೂ, ಪರಿಸರ–ಸ್ನೇಹಿಯೂ ಆದ ಅರ್ಥವ್ಯವಸ್ಥೆ, ಉತ್ಪಾದನೆ, ಬಳಕೆ ಮತ್ತು ಜೀವನಶೈಲಿಗಳನ್ನಾಗಿ ಮಾರ್ಪಡಿಸುವಲ್ಲಿ ನಂಬಿಕೆಯನ್ನು ಉಳ್ಳವರಾಗಿರುತ್ತಾರೆ. ಮುಂದಿನ ಪೀಳಿಗೆಗಾಗಿ ಈ ಪೃಥ್ವಿಯ ಮೇಲಿನ ವಾತಾವರಣವನ್ನು ಮೊದಲಿನ ಉತ್ತಮ ಸ್ಥಿತಿಗೆ ತರುವ ಮತ್ತು ಅಂತೆಯೇ ರಕ್ಷಿಸುವ ಪ್ರಯತ್ನವನ್ನು ಬೆಂಬಲಿಸುತ್ತಾರೆ.

೯.ಜಾಗತಿಕ ವಿದ್ಯೆ: ವಿಶ್ವ ಪೌರರು ಈ ಎಲ್ಲ ಹತ್ತೂ ತತ್ವಗಳಿಗೆ ಸಂಬಂಧಿಸಿದ ಕ್ಷೇತ್ರಗಳಲ್ಲಿ ಜಾಗತಿಕ ಮಟ್ಟದ ವಿದ್ಯಾಭ್ಯಾಸವನ್ನು ಪ್ರೋತ್ಸಾಹಿಸಲು ಬದ್ಧರಾಗಿದ್ದಾರೆ. ಎಲ್ಲೆಡೆ ಜನರು ಜಾಗತಿಕ ಪ್ರಜ್ಞೆಯನ್ನೂ, ವೈಶ್ವಿಕ ಜವಾಬ್ದಾರಿತನವನ್ನೂ ಬೆಳೆಸಿಕೊಳ್ಳಬೇಕಾಗಿದೆ.

೧೦.ಭೂ–ಒಕ್ಕೂಟದ ಸಂವಿಧಾನ: ಭೂ–ಒಕ್ಕೂಟದ ಸಂವಿಧಾನದ ಅಡಿ ನಿರ್ಮಿತವಾದ ಪ್ರಜಾತಾಂತ್ರಿಕಬದ್ಧ ಮತ್ತು ಎಲ್ಲರಿಗೂ ಸಮನಾಗಿ ಅನ್ವಯಿಸುವಂತೆ ಜಾರಿಗೊಳಿಸಬಲ್ಲ ಶಾಸನ ವ್ಯವಸ್ಥೆಯಿಲ್ಲದೆ ಈ ಎಲ್ಲ ಹತ್ತೂ ತತ್ವಗಳ ಯಶಸ್ಸು ಅಸಾಧ್ಯವೆಂದು ವಿಶ್ವ ಪೌರರು ಮನಗಂಡಿದ್ದಾರೆ.